ದಿನಾಂಕ : 16-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ದೋಷಾರೋಪಣೆ ಮಾಡುವ ಪೂರ್ವದಲ್ಲಿ ಸಾಕ್ಷಿದಾರರು ಪಿಡಬ್ಲ್ಯು-2 ಎಂದು ವಿಚಾರಣೆಯನ್ನು ನೀಡಿದ್ದು ಅದೇ ವಿಚಾರಣೆಯನ್ನು ಈಗ ಮುಖ್ಯ ವಿಚಾರಣೆಯಾಗಿ ಪರಿಗಣಿಸುವಂತೆ ಸರ್ಕಾರಿ ಅಭಿಯೋಜಕರು ಮನವಿಯನ್ನು ಮಾಡಿದ್ದು, ಸದರಿ ಮನವಿಯನ್ನು ಪರಿಗಣಿಸಿ, ಪಾಟೀ ಸವಾಲಿಗಾಗಿ ಮುಂದೂಡಲಾಯಿತು .

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಪಿ. ಎ. ಪಿ. ವಕೀಲರಿಂದ ಃ</u>**

ಕಿಡಗೇಡಿ ಗ್ರಾಮದ ತೋಟದಲ್ಲಿ ನಮ್ಮ ಮನೆ ಇದೆ. ಕಿಡಗೇಡಿ ಗ್ರಾಮದಿಂದ ಕೆಂಪವಾಡ ಗ್ರಾಮ 2- 2ವರೇ ಕಿಲೋ ಮೀಟರ ದೂರದಲ್ಲಿ ಇದೆ. ನಮ್ಮ ಮನೆ ಕೆಂಪವಾಡ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ.

2. ಬಾಬಾಸಾಬ , ಶೋಭಾ, ಪ್ರಕಾಶ, ಅನೀಲ ನನ್ನ ಮಕ್ಕಳು ಎನ್ನುವುದು ಸರಿ. ನನ್ನ ಮಗ ಪ್ರಕಾಶನಿಗೆ ಮದುವೆ ಆಗಿರುವುದಿಲ್ಲ, ಉಳಿದವರ ಮದುವೆ ಆಗಿದೆ. ನನ್ನ ಮಗಳು ಶೋಭಾ ಮಹಾರಾಷ್ಟ್ರದ ಇಚ್ಚಲಕರಂಜಿಯಲ್ಲಿ ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದಾಳೆ. ನನ್ನ ಮೂರು ಜನ ಗಂಡು ಮಕ್ಕಳು ಕಿಡಗೇಡಿ ಗ್ರಾಮದಲ್ಲಿ ವಾಸವಾಗಿದ್ದಾರೆ ಮತ್ತು ನನ್ನ ಮಗ ಅನೀಲ ಕೆಂಪವಾಡ ಗ್ರಾಮದಲ್ಲಿ ವಾಸವಾಗಿದ್ದಾನೆ. ನನ್ನ ಎಲ್ಲ ಗಂಡು ಮಕ್ಕಳು ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದಾಳೆ. ನಮ್ಮ ಮನೆಯ ಅಕ್ಕ ಪಕ್ಕದಲ್ಲಿ ಬೇರೆಯವರ ಮನೆಗಳು ವಾಸ ಇರುತ್ತವೆ ಎಂದರೆ ಸರಿ. ನಾವು ಅಕ್ಕ ಪಕ್ಕದ ಮನೆಯವರ ಜೊತೆಯಲ್ಲಿ ವಿಶ್ವಾಸದಿಂದ ಇದ್ದೇವೆ . ನಾನು ಮತ್ತು ನನ್ನ ಮಕ್ಕಳು ಸುಮಾರು 20- 25 ಪ್ರಕರಣಗಳನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ.

3. ನನ್ನ ಮೈದುನ ಗುಂಡು ಅವನ ಭಾಗಕ್ಕೆ ಸೇರಿದ ಜಮೀನನ್ನು ಶ್ರೀಮಂತ ಪಾಟೀಲ ಎನ್ನುವವರಿಗೆ ಮಾರಾಟ ಮಾಡಿ, ಸ್ವಾ ಧೀನ ಬಿಟ್ಟುಕೊಟ್ಟಿದ್ದಾನೆ ಎನ್ನುವುದಕ್ಕೆ ಸಾಕ್ಷಿ ಮಾರಾಟ

ಮಾಡಿರುವುದಿಲ್ಲ ಆದರೇ ಸ್ವಾ ಧೀನನಲ್ಲಿ ಶ್ರೀಮಂತ ಪಾಟೀಲ ರವರನ್ನು ಇರಿಸಿದ್ದಾನೆ. ನನ್ನ ಮೃದುನ ಗುಂಡು ರವರ ವಿರುದ್ಧ ಜಮೀನಿನಲ್ಲಿ ನಮಗೂ ಪಾಲು ಬರಬೇಕು ಎಂದು ನಾವು ಕೇಸು ಮಾಡಿದ್ದೇವೆ. ಸಾಕ್ಷಿ ಮುಂದುವರೆದು ಆ ಜಮೀನನ್ನು ನನ್ನ ಗಂಡ ಖರೀದಿಸಿದ್ದನು ಎಂದು ಹೇಳಿದ್ದಾರೆ. ಆ ರೀತಿ ಸಿವಿಲ್ ವ್ಯಾಜ್ಯ ಇರುವ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎನ್ನುವುದಕ್ಕೆ ಸಾಕ್ಷಿಯು ಮಾಡಿರಬಹುದು ಎಂದು ಹೇಳಿದ್ದಾರೆ.

4. ಈ ಪ್ರಕರಣ ದಾಖಲು ಆಗುವ ಮೊದಲು ನನಗೂ ಆರೋಪಿತರಿಗೂ ಯಾವುದೇ ವೈ ಮನಸ್ಸು ಇರಲಿಲ್ಲ. ಆರೋಪಿತರಿಗೆ ಊರಿನಲ್ಲಿ ಒಳ್ಳೆಯ ಹೆಸರು ಇದೆ ಎನ್ನುವುದು ಸರಿ. 4ನೇ ಆರೋಪಿ ರಮೇಶ ತೇಲಿ ಇವರು ಪಂಚಾಯತಿಯ ಸದಸ್ಯರು ಎನ್ನುವುದು ಸರಿ. ನನ್ನ ಮಗ ಅನೀಲ ಕೆಂಪವಾಡ ಗ್ರಾಮದಲ್ಲಿ ಗ್ರಾಮ ಪಂಚಾಯತಿಗೆ ಸೇರಿದ ಜಾಗದಲ್ಲಿ ಮನೆಯನ್ನು ಕಟ್ಟಿದ್ದು ಅದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆ ಆಗುತ್ತಿದೆ ಎಂದು ಆ ಮನೆ ತೆರವೂಗೊಳಿಸಲು ಪಂಚಾಯತಿ ಸದಸ್ಯರು ಹೇಳುತ್ತಿದ್ದರು ಎನ್ನುವುದು ಸರಿಯಲ್ಲ. ನನ್ನ ಮಗ ಮನೆಯನ್ನು ತೆರವೂ ಗೊಳಿಸದೇ ಇರುವುದರಿಂದ ಪಂಚಾಯತಿಯವರು ಡಿ.ಸಿ ., ಎ.ಸಿ., ರವರಿಗೆ ಮನವಿಯನ್ನು ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ಆರೋಪಿತರು ಎಲ್ಲರೂ ನಮ್ಮ ಮನೆಯ ಹತ್ತಿರ ಸಂಜೆ 04.00 ಗಂಟೆಗೆ ಬಂದು ನಮಗೆ ಹೊಡೆ ಬಡಿ ಮಾಡಿ ಜಾತಿ ಹೆಸರು ಹಿಡಿದು, ಬೈದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸುಮಾರು ಅರ್ಧ ಗಂಟೆ ಆರೋಪಿತರು ನಮಗೆ ಬಡಿದಿರುತ್ತಾರೆ, ಹೊಡೆದಿರುತ್ತಾರೆ. ತೋಟದಲ್ಲಿರುವ ನಮ್ಮ ಮನೆಯ ಅಕ್ಕ ಪಕ್ಕದಲ್ಲಿ ಬೇರೆಯವರು ಮನೆ ಇರುವುದಿಲ್ಲ. ನಮ್ಮದು ಒಂದೇ ಮನೆ ಇದೆ. ಘಟನೆಯ ಶಬ್ದ ಕೇಳಿ ಆಜು ಬಾಜುದವರು ಯಾರು ಬಂದಿರುವುದಿಲ್ಲವೇ ಎನ್ನುವುದಕ್ಕೆ ಸಾಕ್ಷಿಯು ತೋಟದಿಂದ ಮನೆಗಳು ದೂರ ಇರುವ ಕಾರಣ ಯಾರು ಬಂದಿರುವುದಿಲ್ಲ ಎಂದು ಹೇಳಿರುತ್ತಾರೆ. ಅಕ್ಕ ಪಕ್ಕದಲ್ಲಿ ತೋಟಗಳು ಇವೆ ಎನ್ನುವುದಕ್ಕೆ ಸಾಕ್ಷಿಯು ಆರೋಪಿತರ ತೋಟಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಜೋರಾಗಿ ಗಲಾಟೆ ಆದರೆ, ಜೋರಾಗಿ

ಚೀರಾಡಿದರೆ ಸುಮಾರು 400 – 500 ಮೀಟರ ಕೇಳಿಸುತ್ತದೆ ಎನ್ನುವುದಕ್ಕೆ ಸಾಕ್ಷಿಯು ಕೇಳಿದ್ದರೂ ಸಹ ಯಾರೂ ಬಂದಿರುವುದಿಲ್ಲ ಎಂದು ಹೇಳಿದ್ದಾರೆ. ನಾನು ಹೇಳಿದಂತಹ ಯಾವುದೇ ಘಟನೆ ಆಗಿರುವುದಿಲ್ಲ ಆ ಕಾರಣ ಅಕ್ಕ ಪಕ್ಕದವರು ಯಾರೂ ಬಂದಿರುವುದಿಲ್ಲ ಎನ್ನುವುದು ಸರಿಯಲ್ಲ.

6. ಆರೋಪಿತರು ನಮ್ಮ ಮನೆಯ ಬಳಿ ಬಂದಿಲ್ಲ , ನನ್ನ ಸೀರೆ ಹಿಡಿದು ಜಗ್ಗಾಡಿಲ್ಲ, ಅವಮಾನ ಮಾಡಿಲ್ಲ, ಕೇಸನ್ನು ವಾಪಸ್ಸು ತೆಗೆದುಕೊಳ್ಳುವಂತೆ ಬೆದರಿಕೆ ಹಾಕಿಲ್ಲ ಎನ್ನುವುದು ಸರಿಯಲ್ಲ. ನನ್ನ ಮಗಳು ಶೋಭಾ ಜಗಳ ಬಿಡಿಸಿದಳು, ನಂತರ ನಾವು ಕಾಗವಾಡ ಪೋಲಿಸ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಕೇಸಿಗೂ ಆರೋಪಿತರಿಗೊ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.